# ‘ಭಗವಂತನ ಮಹಿಮೆ ಅನುಭವಿಸಿದರೆ ಜ್ಞಾನದ ಬೆಳಕು’



ಶಿರಸಿ: ಭಗವಂತನ ಮಹಿಮೆಗಳನ್ನು ಅನುಭವಿಸಿದರೆ ಜ್ಞಾನದ ಬೆಳಕು ಲಭಿಸುತ್ತದೆ ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ನುಡಿದರು.

ಅವರು ಸ್ವರ್ಣವಲ್ಲೀ ಮಠದಲ್ಲಿ ಚಾತುರ್ಮಾಸ್ಯ ವ್ರತ ಸಂಕಲ್ಪದ ಕಾಲದಲ್ಲಿ ಕಿಸಲವಾಡಾ ಹಾಗೂ ಶಿವಳ್ಳಿ ಸೀಮಾ ಭಕ್ತರು ಶುಕ್ರವಾರ ಸಲ್ಲಿಸಿದ ಗುರು ಸೇವೆ ಸ್ವೀಕರಿಸಿ ಆಶೀರ್ವಚನ ನೀಡಿದರು.

‘ಭಗವಂತ ಹೃದಯದೊಳಗೆ ಇದ್ದರೆ ಅಜ್ಞಾನ ಹೋಗಲಾಡಿಸಿ ಜ್ಞಾನದ ಬೆಳಕು ಸೃಷ್ಟಿಸುತ್ತಾನೆ. ಅದಕ್ಕಾಗಿ ಧ್ಯಾನ, ಪೂಜೆ, ಪುನಸ್ಕಾರ ಮಾಡಬೇಕು’ ಎಂದು ಹೇಳಿದರು.

ಈ ವೇಳೆ ಪ್ರಮುಖರಾದ ಆರ್.ಎಸ್.ಹೆಗಡೆ ಭೈರುಂಬೆ, ವಿಶ್ವನಾಥ ಹೆಗಡೆ ಅತ್ತಿಸರ, ಪ್ರಶಾಂತ ಭಟ್ ಬೆಣ್ಣೆಗದ್ದೆ, ರಾಮಕೃಷ್ಣ ಭಟ್ ಬಕ್ಕಳ, ಮಾದೇವ ಹೆಗಡೆ ಶಶಿಮನೆ, ಸುಮಾನ ಭಟ್ ಬೆಣ್ಣೆಗದ್ದೆ, ಗಣಪತಿ ಭಟ್ ಮಣದೂರ, ಮಠದ ಕಾರ್ಯದರ್ಶಿ ಗಣಪತಿ ಹೆಗಡೆ ಗೊಡವೇಮನೆ, ಮಂಜುನಾಥ ಹೆಗಡೆ ಹೆಗಡೆಮನೆ, ಪ್ರಸನ್ನ ಭಟ್ ಓಣಿಕೈ ಇತರರು ಇದ್ದರು. ಈ ವೇಳೆ ಮಾತೆಯರು ಕುಂಕುಮಾರ್ಚನೆ ನೆರವೇರಿಸಿದರು.